ಮೇಲ್ಕಂಡ ಅಧಿನಿಯಮ ಹಾಗೂ ನಿಯಮಗಳು ಸರ್ಕಾರವು ಅಧಿಸೂಚಿಸಿದ ದಿನಾಂಕದಿಂದ ಜಾರಿಗೆ ಬರುವ ಕಾರಣ, ಇವುಗಳು ದಿನಾಂಕ: 10–11–2009 ರಿಂದ ಜಾರಿಗೆ ಬರುವಂತೆ ಆದೇಶಿಸಲಾಗಿದೆ.

ಈ ಅಧಿನಿಯಮ/ನಿಯಮಗಳ ಅಡಿಯಲ್ಲಿ ಖಾಸಗಿಯಾಗಿ ಪ್ರಾಕ್ಟೀಸ್ ಮಾಡುವ ವೈದ್ಯರ ತೆರಿಗೆ ಕುರಿತಂತೆ ಯಾವುದೇ ಪ್ರಸ್ತಾಪವಿರುವುದಿಲ್ಲ.

ಆ) ಖಾಸಗಿ ನರ್ಸಿಂಗ್ ಹೋಂ ಮತ್ತು ಆಸ್ಪತ್ರೆಗಳ ವೆಚ್ಚದ ವಿವರಗಳ ಕುರಿತಂತೆ ಸರ್ಕಾರಕ್ಕೆ ಸದರಿ ಖಾಸಗಿ ಸಂಸ್ಥೆಗಳು ವರದಿ ಮಾಡುವ ಪರಿಪಾಠವಿಲ್ಲದ ಕಾರಣ ಇದು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಸಾರಿಗೆ ಸಂಸ್ಥೆಗಳಲ್ಲಿ ಹಿರಿಯ ನಾಗರಿಕರಿಗೆ ಸೌಲಭ್ಯ

881 (1472) ಶ್ರೀ ಸಿ.ಬಿ. ಕೃಷ್ಣಭೈರೇಗೌಡ (ಬ್ಯಾಟರಾಯನಪುರ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯ ಸಾರಿಗೆ (KSRTC) ಮತ್ತು ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯ ಬಸ್ಸುಗಳಲ್ಲಿ ಹಿರಿಯ ನಾಗರಿಕರಿಗೆ ರಿಯಾಯಿತಿ ನೀಡಲು ನಿಗದಿಪಡಿಸಿರುವ ವಯೋಮಿತಿ ಎಷ್ಟು;

ಆ) ಭಾರತೀಯ ರೈಲ್ವೆಯಲ್ಲಿ ಹಿರಿಯ ನಾಗರಿಕರಿಗೆ 60 ವರ್ಷ ವಯೋಮಿತಿ ನಿಗದಿ ಮಾಡಿರುವುದು ಸರ್ಕಾರದ ಗಮನದಲ್ಲಿದೆಯೇ;

ಇ) ಹಾಗಿದ್ದಲ್ಲಿ, ಹಿರಿಯ ನಾಗರಿಕರ ಅನುಕೂಲ ಮತ್ತು ಮಾನವೀಯತೆಯ ದೃಷ್ಟಿಯಿಂದ ರಾಜ್ಯದಲ್ಲಿ ಈ ವಯೋಮಿತಿಯನ್ನು 60 ವರ್ಷವೆಂದು ನಿಗದಿಗೊಳಿಸಲಾಗುವುದೇ;

ಇ) ರಾಜ್ಯ ಸಾರಿಗೆ ಬಸ್ಸುಗಳಲ್ಲಿ ಹಿರಿಯ ನಾಗರಿಕರಿಗೆ ಕನಿಷ್ಟ 4 ಆಸನಗಳನ್ನು ಮೀಸಲಿರಿಸಲಾಗುವುದೇ?

ಶ್ರೀ ಆರ್. ಅಶೋಕ್ (ಸಾರಿಗೆ ಸಚಿವರು) :

ಅ) 65 ವರ್ಷ ಮತ್ತು ಅದಕ್ಕೂ ಹೆಚ್ಚು.

ಆ) ಹೌದು.

ಇ) ಪ್ರಸ್ತಾವನೆ ಸರ್ಕಾರದ ಮುಂದಿರುವುದಿಲ್ಲ.

ಈ) ಕ.ರಾ.ರ.ಸಾ. ನಿಗಮದ ಸಾರಿಗೆಗಳಲ್ಲಿ ಈಗಾಗಲೇ ಮಹಿಳೆಯರಿಗೆ, ಸ್ವಾತಂತ್ರ್ಯ ಹೋರಾಟಗಾರರಿಗೆ, ಹಿರಿಯ ನಾಗರಿಕರಿಗೆ, ಅಂಧರಿಗೆ ಹಾಗೂ ಅಂಗವಿಕಲರಿಗೆ ಆಸನಗಳನ್ನು ಮೀಸಲಿರಿಸಲಾಗಿದೆ. ಸಾಮಾನ್ಯ ಹಾಗೂ ವೇಗದೂತ ಸಾರಿಗೆಗಳಲ್ಲಿ ಹಿರಿಯ ನಾಗರಿಕರಿಗೆ ಈಗಾಗಲೇ ಮೀಸಲಿರಿಸಿರುವ 2 ಆಸನಗಳಿಂದ 4 ಆಸನಗಳಿಗೆ ಹೆಚ್ಚಿಸುವುದು ಕಷ್ಟಸಾಧ್ಯವಾಗಿರುತ್ತದೆ.

ಆಂಬ್ಯುಲೆನ್ಸ್‌ಗಳನ್ನು ಒದಗಿಸಿರುವುದು

882 (1473) ಶ್ರೀ ಕೃಷ್ಣಭೈರೇಗೌಡ ಸಿ.ಬಿ. (ಬ್ಯಾಟರಾಯನಪುರ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಆರೋಗ್ಯ ಕವಚ ಕಾರ್ಯಕ್ರಮದಡಿಯಲ್ಲಿ ಕರ್ನಾಟಕದಾದ್ಯಂತ ಎಷ್ಟು ಆಂಬುಲೆನ್ಸ್‌ಗಳನ್ನು ಒದಗಿಸಲಾಗಿದೆ, ಈ ಆಂಬುಲೆನ್ಸ್‌ಗಳ ಖರೀದಿಗಾಗಿ ರಾಜ್ಯ ಸರ್ಕಾರವು ಎಷ್ಟು ಹಣ ಖರ್ಚು ಮಾಡಿದೆ;

ಆ) ಈ ಆಂಬುಲೆನ್ಸ್‌ಗಳ ಖರೀದಿಗೆ ಹಣಕಾಸನ್ನು ಯಾವ ಯಾವ ಮೂಲಗಳಿಂದ/ಯೋಜನೆಗಳಡಿಯಲ್ಲಿ ಒದಗಿಸಲಾಗಿದೆ (ವಿವರ ನೀಡುವುದು);

ಇ) ಕೇಂದ್ರ ಸರ್ಕಾರದಿಂದ ಬಂದಂತಹ ಅನುದಾನವನ್ನು ಈ ಉದ್ದೇಶದ ಆಂಬುಲೆನ್ಸ್ ಸಲುವಾಗಿ ಉಪಯೋಗಿಸಲಾಗಿದೆಯೇ;

ಇ) ಪಾರದರ್ಶಕತೆ ಮತ್ತು ಜವಾಬ್ದಾರಿತನ (Transparency and accountability) ಕೇಂದ್ರ ಸರ್ಕಾರದ ಕೊಡುಗೆಯನ್ನು ಬಿತ್ತರಿಸುವ ಮುಖಾಂತರ ಸಾರ್ವಜನಿಕರ ಗಮನಕ್ಕೆ ತರಲು ಕ್ರಮ ಕೈಗೊಳ್ಳಲಾಗುವುದೇ;

ಉ) ಕೇಂದ್ರ ಸರ್ಕಾರದ ಅನುದಾನ ಉಪಯೋಗಿಸಿ (ಆಂಬುಲೆನ್ಸ್) ಗಳನ್ನು ಖರೀದಿಸಿದ್ದಲ್ಲಿ, ಈಗಾಗಲೇ (ಆಂಬುಲೆನ್ಸ್)ಗಳ ಮೇಲೆ ಮಾನ್ಯ ಮುಖ್ಯಮಂತ್ರಿ ಹಾಗೂ ಆರೋಗ್ಯ ಸಚಿವರ ಜೊತೆಗೆ ಭಾರತದ ಮಾನ್ಯ ಪ್ರಧಾನ ಮಂತ್ರಿಯವರ ಹಾಗೂ ಕೇಂದ್ರ ಆರೋಗ್ಯ ಸಚಿವರ ಭಾವಚಿತ್ರ ಗಳನ್ನು (ಶಿಷ್ಟಾಚಾರ) ಪ್ರಕಾರ ಅಳವಡಿಸುವುದು ಸೂಕ್ತವಲ್ಲವೇ;

ಊ) ಹಾಗಿದ್ದಲ್ಲಿ, ಎಷ್ಟು ದಿನಗಳಲ್ಲಿ ಈ ಲೋಪವನ್ನು ಸರಿಪಡಿಸಲಾಗುವುದು?